ಮುಖತೊಳೆದುಕೊಂಡು ಚಹಾ ಕುಡಿದು ಮನೆಯಲ್ಲಾ ಕಣ್ಣಾಡಿಸಿದ. ಲಿಂಗೇಶ ಎಲ್ಲೂ ಕಾಣಲಿಲ್ಲ. ಎಷ್ಟು ಹೊತ್ತಾದರೂ ಮತ್ತೊಂದು ಗಿರಾಕಿ ಬರಲಿಲ್ಲ. ಹಿಂದೊಮ್ಮೆ ರಾಜದರ್ಬಾರಿನಂತೆ ನಡೆದ ಹೋಟೆಲ್ ಇವತ್ತು ಗಿರಾಕಿಗಳಿಲ್ಲದೆ ನೊಣ ಹೊಡೆಯುತ್ತಿತ್ತು. ಒಂದು ಗಿರಾಕಿ ಬಂತು. ಚಂದ್ರವತಿಯ ಮುಖದಲ್ಲಿ ಬೆಳ್ಳಿಬೆಳಕು ಬೆಳ್ಳನೆ ಹೊತ್ತಿಕೊಂಡಿತು. ಸುಮಾರು ಹೊತ್ತಿನಿಂದ ಅರ್ಧ ಟೀ ಕುಡಿದು ಕುಳಿತಿದ್ದ ಆ ಎರಡು ಗಿರಾಕಿಗಳು ಮುಖಮುಖ ನೋಡಿಕೊಂಡು ಮುಗುಳುನಗುತ್ತಾ ರಾಮಚಂದ್ರನ ಕೈಲಿ ಹತ್ತು ರೂಪಾಯಿ ಇಟ್ಟು ಹೊರಟರು. ಅವರ ನೋಟ–ನಡೆ ರಾಮಚಂದ್ರನಿಗೆ ವಿಚಿತ್ರ ಸಂಕಟವನ್ನುಂಟು ಮಾಡಿತು. ಬಂದ ಗಿರಾಕಿ ರಾಮಚಂದ್ರನನ್ನು ತುಂಬಾ ಕಾಳಜಿಯಿಂದ ಮಾತನಾಡಿಸಿತು. ರಾಮಚಂದ್ರ ಓದುವ ಶಾಲೆ, ತರಗತಿ ಕೇಳಿತು. 'ಚೆನ್ನಾಗಿ ಓದು' ಅಂತ ಸೀರಿಯಸ್ಸಾಗಿ ಬುದ್ಧಿವಾದ ಹೇಳತೊಡಗಿತು. ಹೆಸರೇನು ನೆನಪಿರದ ಆ ಗಿರಾಕಿಯ ಮುಖ ಪರಿಚಯ ಮಾತ್ರ ರಾಮಚಂದ್ರನಿಗೆ ಸ್ಪಷ್ಟವಾಗಿತ್ತು. ಒಮ್ಮೊಮ್ಮೆ ಚಂದ್ರವತಿಯ ಕಡೆ ನೋಡಿ ಮುಗುಳುನಗುತ್ತಿತ್ತು. ಅಷ್ಟರಲ್ಲಿ ಲಿಂಗೇಶ ಬಂದ. ತುಂಬಾ ಕುಡಿದಿದ್ದ. ನಿಂತುಕೊಳ್ಳುವುದಕ್ಕೂ ಆಗುತ್ತಿರಲಿಲ್ಲ. ಅಲ್ಲಿದ್ದ ಗಿರಾಕಿ ಲಿಂಗೇಶನಿಗೂ ಬುದ್ಧಿ ಹೇಳತೊಡಗಿತು. ಲಿಂಗೇಶ ಸುಮ್ಮನೆ ತಲೆಬಗ್ಗಿಸಿಕೊಂಡು ಕೇಳುತ್ತಿರುವವನಂತೆ ನಟಿಸುತ್ತಿದ್ದ. ಸ್ವಲ್ಪ ಹೊತ್ತಾದ ಮೇಲೆ ಎದ್ದು ಹೊರಡಲು ಅನುವಾದ ಆ ಗಿರಾಕಿ, ಲಿಂಗೇಶನ ಕೈಗೆ ನೂರರ ನೋಟು ತುರುಕಿತು. ಚಂದ್ರವತಿಯನ್ನು ಒಮ್ಮೆ ಪ್ರೀತಿಪೂರ್ವಕವಾಗಿ ದಿಟ್ಟಿಸಿ ಆ ಗಿರಾಕಿ ಹೊರಗೆ ಕಾಲಿಟ್ಟಾಗ ಲಿಂಗೇಶ ಕಟಕಟಕಟನೆ ಹಲ್ಲುಕಡಿಯುತ್ತಾ ತಾನು ಕುಳಿತಿದ್ದ ಗೋಡೆಗೆ ಗಟ್ಟಿಯಾಗಿ ಗುದ್ದಿದ. ಬಳಬಳನೆ ರಕ್ತ ಲಿಂಗೇಶನ ಕೈಯಿಂದ ಸೋರತೊಡಗಿತು. 'ಈ ಪೌರುಷಕ್ಕೆ ಏನೂ ಕಮ್ಮಿಯಿಲ್ಲ' ಅಂತ ಚಂದ್ರವತಿ ಹಂಗಿಸಿದಳು. ರಾಮಚಂದ್ರ ಅಲ್ಲೇ ಇದ್ದ ಅರಿಶಿನ ತಗೊಂಡು ಲಿಂಗೇಶನ ಕೈಗೆ ಹಾಕಿ ಬಟ್ಟೆಕೊಂಚೆ ಕಟ್ಟಿದ. ಸೂಕ್ಷ್ಮವಾಗಿ ಅವನಿಗೆಲ್ಲ ಅರ್ಥವಾಯಿತು.

ಲಿಂಗೇಶನ ಅಸಹಾಯಕತೆ ಉಪಯೋಗಿಸಿಕೊಂಡು ಚಂದ್ರವತಿ ಮುಂದುವರೆದಿದ್ದಳು. ಸರಿರಾತ್ರಿಯಲ್ಲಿ ಬಂದು ಅವನು ಚಂದ್ರವತಿಯನ್ನು ರಮಿಸಿ ಹೋಗುತ್ತಿದ್ದ. ನಶೆಯ ಅಮಲಿನಲ್ಲಿ ಲಿಂಗೇಶ ಮಲಗಿರುತ್ತಿದ್ದ. ರಾಮಚಂದ್ರನಿಗೆ ಒಬ್ಬ ಅಕ್ಕ ಇದ್ದಳು, ಭಾಗ್ಯ ಅಂತ. ನೋಡಲು ತೆಳ್ಳಗೆ ಬೆಳ್ಳಗೆ ತಾಯಿಯಂತೆ ಚೆಲುವಿ. ತಂದೆಯಂತೆ ಜಾಣೆ. ಊರಲ್ಲಿದ್ದ ತನ್ನ ವಾರಿಗೆಯ ಗೆಳತಿಯರ ಜೊತೆ ಮಿಷನ್ ಕಲೆತಿದ್ದಳು. ಸರಕಾರದಿಂದ ಉಡುಗೊರೆಯಾಗಿ ಬಂದ ಮಿಷನ್‌ನಲ್ಲೇ ಚೆಂದದ ಕುಪ್ಪಸಗಳನ್ನು ಹೊಲೆದು, ಬಂದ ನಾಲ್ಕು ರೊಕ್ಕವನ್ನು ಚಂದ್ರವತಿಗೆ ಕೊಡುತ್ತಿದ್ದಳು. ಭಾಗ್ಯ ದೊಡ್ಡವಳಾದ ವರ್ಷದೊಳಗೆ, ಚಂದ್ರವತಿ ತನ್ನ ಸೋದರ ಸಂಬಂಧದಲ್ಲಿ ಮದುವೆ ಮಾಡಿಕೊಟ್ಟಿದ್ದರು. ರಾಮಚಂದ್ರ ತನ್ನ ಅಕ್ಕನಿಗೆ ಸೂಕ್ಷ್ಮವಾಗಿ ಚಂದ್ರವತಿಯ ಗೆಳೆಯನ ಬಗ್ಗೆ ಹೇಳಿದ್ದ. ಗಂಡನ ಮನೆಯಿಂದ ಒಮ್ಮೆ ತವರಿಗೆ ಮಾತನಾಡಿಸಲು ಬಂದಿದ್ದ ಭಾಗ್ಯ ಸರಿರಾತ್ರಿವರೆಗೂ ತಮ್ಮನ ಜೊತೆಗೆ ಎಚ್ಚರವಿದ್ದು ಎಲ್ಲವನ್ನೂ ಗಮನಿಸಿದ್ದರು. ಸರಿರಾತ್ರಿಯಲ್ಲಿ ಆ ದಿನವೂ ಚಂದ್ರವತಿಯ ಗೆಳೆಯ ಬಂದ. ರಾಮಚಂದ್ರನ ಅಕ್ಕ ಎದ್ದವಳು ಲೈಟು ಹಾಕಿ, ಮೂಲೆಯಲ್ಲಿದ್ದ ಕಸಬರಿಗೆ ತಗೊಂಡು ಜಗಳಕ್ಕೆ ನಿಂತಳು. ಅವನು ಎದ್ದೆನೋ ಬಿದ್ದೆನೋ ಅಂತ ಓಡಿದ. ಚಂದ್ರವತಿಗೆ ತುಂಬಾ ಅವಮಾನವಾದಂತಾಗಿ ರಾತ್ರಿಯಲ್ಲಿ ಇಬ್ಬರು ಜಗಳಕ್ಕೆ ಬಿದ್ದರು. ರಾಮಚಂದ್ರ ಇಬ್ಬರನ್ನು ಸುಮ್ಮನಾಗಿಸುವಷ್ಟರಲ್ಲಿ ಸಾಕುಸಾಕಾಗಿ ಹೋಯಿತು. ಲಿಂಗೇಶ ನಶೆಯಿಂದ ಎದ್ದವನೇ ಒಮ್ಮೆ ಮಿಕಮಿಕ ನೋಡಿ ಮತ್ತೆ ಮಲಗಿದ. ಭಾಗ್ಯ ಬೆಳಿಗ್ಗೆ ಎದ್ದವಳೇ ರಾಮಚಂದ್ರನನ್ನು ಕರೆದುಕೊಂಡು ತನ್ನ ಗಂಡನ ಮನೆಗೆ ಹೋದಳು.

ರಾಮಚಂದ್ರ ತನ್ನ ಅಕ್ಕನನ್ನು ಗಂಡನ ಮನೇಲಿ ಬಿಟ್ಟು ಬಂದು ಚಂದ್ರವತಿ ಜೊತೆ ಜಗಳಕ್ಕೆ ಬಿದ್ದ. ಚಂದ್ರವತಿ ರಾಮಚಂದ್ರನ ಮಾತು ಕೇಳುವ ಮನಸ್ಥಿತಿಯಲ್ಲಿ ಇರಲಿಲ್ಲ. ಅವನ ಪ್ರೀತಿ ಚಂದ್ರವತಿಯನ್ನು ಕುರುಡಾಗಿಸಿತ್ತು. ರಾಮಚಂದ್ರ ಹೇಳುವಷ್ಟು ಹೇಳಿ ಸುಮ್ಮನಾದ. ಓದುವುದಕ್ಕೆ ಮತ್ತೆ ಹಾಸ್ಟೆಲ್‌ಗೆ ಹೋದ. ಮೂರು ನಾಲ್ಕು ತಿಂಗಳಲ್ಲಿ ಲಿಂಗೇಶ ನೇಣು ಹಾಕಿಕೊಂಡು ಸತ್ತ ಸುದ್ದಿ ತನ್ನ ಊರಿನ ತಳವಾರ ರಾಮಣ್ಣ ಬಂದು ಹೇಳಿದಾಗ ರಾಮಚಂದ್ರ ಮಾತು ಕಳೆದುಕೊಂಡ ಮೂಕನಂತೆ ರಾಮಣ್ಣನ